ಬಾಗಿಲನ್ನು ಸದಾ ಮುಚ್ಚಿಡುತ್ತಿದ್ದರು. ಒಳಗೆ ಅವರಿಗಾಗಿಯೇ ಒಂದು ಇಳಿಜಾರು ಮೇಜು, ಅದರ ಮೇಲೆ ಒಂದು ಕಟ್ಟು ಬಿಳಿ ಹಾಳೆ, ಒಂದು ಶಾಯಿ ಬಾಟಲು ಮತ್ತು ಒಂದು ಸ್ಟೀಲ್‌ಕಡ್ಡಿ. ಇದಿಷ್ಟು ಸದಾ ಅವರ ಮುಂದಿರುತ್ತಿತ್ತು. ತುಂಬಾ ಚಂಚಲತೆಗೆ ಒಳಗಾಗಿದ್ದರು... ನಂತರದ ದಿನಗಳಲ್ಲಿ ಪ್ರಕೃತಿ, ಗುಡ್ಡ ಬೆಟ್ಟ, ನದಿ ಇವುಗಳ ಪದ್ಯಗಳನ್ನು ರಚಿಸುತ್ತಿದ್ದರು. ಭಾಷೆ ಸ್ವಲ್ಪ ಕಠಿಣವಿದ್ದರೂ ಕಿವಿಗೆ ಸುಂದರವೆನಿಸುತ್ತಿತ್ತು. ಅವರ ತಂಗಿ ಸಾವಿತ್ರಮ್ಮ ಆಗಾಗ ಇವರ ಮನೆಗೆ ಬರುತ್ತಿದ್ದುದುಂಟು... ಅವರು ಬಂದರೆಂದರೆ ಅಣ್ಣ ತಂಗಿಯರ ಮಾತುಕತೆ–ಸಿನಿಮಾ, ನಾಟಕ, ರಾಜಕೀಯ–ನಗು ಅಳು ಎಲ್ಲ ಇರುತ್ತಿತ್ತು. ವಾರಕ್ಕೊಂದಾವರ್ತಿ ನನ್ನನ್ನು ಅವರ ಮನೆಗೆ ಕರೆಸಿಕೊಂಡು ಹಾಡಿಸಿ ಕೇಳುತ್ತಿದ್ದರು. ಅದರ ಅರ್ಥಕ್ಕೆ ತುಂಬಾ ಭಾವುಕರಾಗಿ ಅಳುತ್ತಿದ್ದರು. 'ಗಾಳಿ ಗೋಪುರ ನಿನ್ನಾಶಾ ತೀರ' ಎನ್ನುವ ಹಾಡು ಅವರಿಗೆ ಬಹಳ ಇಷ್ಟವಾದದ್ದು. ಶಾಮಣ್ಣ ಮಾವಯ್ಯನ ಮಗಳು ನನ್ನ ಆಪ್ತ ಗೆಳತಿ... ಅವಳು ಇನ್ನಿಲ್ಲವಾದಳು... ಈ ಆಘಾತದಿಂದ ಅವರು ಚೇತರಿಸಿಕೊಳ್ಳಲಿಲ್ಲ. ವಾರಗಟ್ಟಲೆ ಅವರ ಮನೆಮುಂದಿನ ಬಾಗಿಲು ತೆರೆಯಲಿಲ್ಲ.'' – ಈ ಬರವಣಿಗೆಯ ಕಂಪನ ವಿಸ್ತಾರ ಆಳವಾದದ್ದು. 'ನಮ್ಮೂರ ಜಾತ್ರೆ' ಎಂಬ ಅಧ್ಯಾಯವಂತೂ ತೆರೆದ ಕಣ್ಣೆದುರೇ ನಡೆಯುತ್ತಿರುವ ಕನಸಿನಂತಿದೆ. ಒಬ್ಬ ಕಂಡ ಕನಸಿನಂತಲ್ಲ, ಎಲ್ಲರೂ ಸೇರಿ ಕಂಡ ಕನಸಿನಂತೆ.

ಈ ಪುಸ್ತಕದ ಮಹಾಪ್ರಾಣದ ಅಭಿನ್ನ ಅಂಗವಾಗಿಯೇ ಮೂಡಿರುವ ನೂರಕ್ಕೂ ಹೆಚ್ಚು ಅಡಿಗೆ ಪದಾರ್ಥಗಳನ್ನು ಮಾಡುವ ವಿಧಾನದ ಕುರಿತ ವಿವರವಾದ ಮಾಹಿತಿಗಳು ಅವರ ನೆನಪಿನ ಬಳ್ಳಿಗೆ ಸ್ಥೈರ್ಯ ಕೊಡುವ ಹಂದರದಂತಿವೆ. ಯಾವುದು ಹಂದರ, ಯಾವುದು ಬಳ್ಳಿ ಅನ್ನುವುದು ತಿಳಿಯದಂತೆ! ''ಬೇಯಿಸಿದ ಆಲೂಗಡ್ಡೆಯನ್ನು ಗಂಟಿಲ್ಲದಂತೆ ಪುಡಿ ಮಾಡಿಕೊಂಡು...'', ''ಹದ ಸರಿಯಿದ್ದರೆ ಚೋಮಾಯಿ ಮಾಲೆ ಮಾಲೆಯಾಗಿ ಬೀಳುತ್ತದೆ...'' ಇಂಥ ಆಸ್ವಾದಕ ವಿವರಗಳಲ್ಲಿ ಅವರು ಹಂಚಿಕೊಂಡಿರುವ ಬಗೆ ಬಗೆ ಖಾದ್ಯ ಪದಾರ್ಥಗಳ ಸೂತ್ರ ಮತ್ತು ವಿಧಾನಗಳು – ಅವರು ತಮ್ಮ ಗ್ರಾಮ, ಕುಟುಂಬ, ಆಪ್ತೇಷ್ಟರಿಂದ ಪಡೆದ ಅಮೂಲ್ಯ ಜೀವನ ಮೌಲ್ಯದ ವಿಸ್ತರಣೆಯೇ ಆಗಿವೆ. ನಿಸರ್ಗದ ಲಯ, ಸಾಮಗ್ರಿಯ ಲಭ್ಯತೆ, ಮಿತವ್ಯಯ, ಆರೋಗ್ಯ, ಒಡನಾಟಕ್ಕೆ ನೆಪ, ಸಹಜೀವಿಗಳಿಗೆ ಉಣಿಸುವ ಸಮಾಧಾನಗಳ ಜೊತೆಗೆ ಎಂಥ ಸತ್ವಪರೀಕ್ಷೆಯ ಕಾಲದಲ್ಲೂ ಒಂದು ಇಂಬಿನಂತೆ, ಬಚಾವಿನ ವ್ರತದಂತೆ ಒದಗಿ ಬಂದ ವಿದ್ಯಮಾನ ಇದು. ಹೀಗಾಗಿಯೇ 'ತಾತ್ಕಾಲಿಕವಾಗಿ ಹೊಟ್ಟೆ ತುಂಬುವಷ್ಟು...' ಎಂಬ ಮಾತು ಪುಸ್ತಕದಲ್ಲಿ ಅನೇಕ ಸಲ ಬರುತ್ತದೆ. 'ಉರಿ' ಮತ್ತು 'ಹದ' – ಇವೆರೆಡೇ ಪದಗಳಲ್ಲೇ ಈ ಪಾಕ ಪುಟಗಳ ಜೀವ ಇದೆ. ''ಯಾವುದನ್ನೂ ದೊಡ್ಡ ಉರಿಯಲ್ಲಿ ಮಾಡುವುದಿಲ್ಲ. ನಿಧಾನವಾಗಿ ಬೆಂದ ತರಕಾರಿ ಬೇಳೆಗಳಲ್ಲಿ ಪರಿಮಳ ವಿಶಿಷ್ಟವಾಗಿರುತ್ತದೆ.'' ಎನ್ನುವ ಮಾತು ಪ್ರಮೀಳಾರ ಬರವಣಿಗೆಗೆ, ಬಾಳಿನ ನಿಲುಮೆಗೇ ಅನ್ವಯವಾಗುವಂತಿದೆ. 'ಉರಿ' ಎಷ್ಟು ಮತ್ತು 'ಹದ' ಹೇಗೆ ಎಂಬುದು ಅನುಭವದಿಂದಲೇ ಬರುವ ಪಾಕ ವಿವೇಕ.

ಇಲ್ಲಿ ನನಗೆ ಯಶವಂತ ಚಿತ್ತಾಲರ ''ಸೂತಕದ ಮನೆಯಲ್ಲಿ ಗಂಜಿಯೂಟ'' – ಎಂಬ ಮನೋಜ್ಞ ಪ್ರಬಂಧ ನೆನಪಾಗುತ್ತದೆ. ಅದರಲ್ಲಿ, ತೀರಿಕೊಂಡ ಮನೆ ಹಿರಿಯರ ಅಂತ್ಯಕ್ರಿಯೆ ಮಾಡಿ ಸ್ನಾನ ಮುಗಿಸಿ ಬಂದವರಿಗೆ ಮನೆಯಲ್ಲಿ ಕಾಯುತ್ತಿದ್ದ ಗಂಜಿಯೂಟದ ಬಗ್ಗೆ ಅವರು ಬರೆಯುತ್ತಾರೆ. ಕುಚ್ಚಿಗೆ ಅಕ್ಕಿಯ ಗಂಜಿ ಮತ್ತು ಉಪ್ಪುನೀರಿನಲ್ಲಿಟ್ಟ ಮಾವಿನ ಮಿಡಿಯ ಚೂರು (ಅದಕ್ಕೆ ನೀರು ಮಿಡಿ ಎನ್ನುತ್ತಾರೆ). ಆ ಊಟದಂಥ ರುಚಿಯಾದ ಊಟ ಬಾಳಿನಲ್ಲೇ ಇನ್ನೊಂದಿರಲಿಲ್ಲ ಅನ್ನುತ್ತಾರೆ ಚಿತ್ತಾಲ. ಅಂದರೆ, ಸಾವಿನ ಅತೀ ಸಮೀಪದ ಮುಖಾಮುಖಿಯಲ್ಲಿ ಉಲ್ಬಣಗೊಂಡ ಬದುಕಿನ ಕುರಿತಾದ ತೀವ್ರ ಹಸಿವಿನ ಕ್ಷಣ ಅದು. ಕಾವ್ಯದ ಬಗ್ಗೆ ಮಾತಾಡುತ್ತ ಬೇಂದ್ರೆ ಹೇಳುವ, ''ಯಾರಿಗೆ ನೀರು ಕುಡಿದರೆ ಆನಂದ ಆಗೂದಿಲ್ಲಾ, ಅವರಿಗೇನು ತಿಳಿದೀತು ಕಾವ್ಯದ ರುಚಿ'' – ಎನ್ನುವ ಮಾತೂ